# ಕಿಟಕಿ



ಕಲೆ: ಡಿ.ಕೆ. ರಮೇಶ್

ಮನೆಯ ಗೋಡೆಯ ನಡುವೆ
ಇರುವ ಮಾಯಾ ಕಿಟಕಿ
ತೋರದು ಯಾರಿಗೂ ತನ್ನಿರವನು

ಸುತ್ತ ಕತ್ತಲು ಹರಡಿಕೊಂಡಾಗ
ಮೆಲ್ಲನೆ ತೆರೆದುಕೊಳ್ಳುವುದು;
ಚಿಟ್ಟೆ ರೆಕ್ಕೆ ಪಡೆದುಕೊಂಡಂತೆ!

ಕತ್ತಲೆ ಸೀಳಿ ಕಿಟಕಿಯಾಚೆಗೆ
ಮಾಯಕದ ಬೆಳಕು ಹರಡಿ
ಅಪ್ಸರೆಯರು ಹಾದು ಹೋಗುವರು
ಅಪ್ಪಟ ಗೃಹಿಣಿಯರು ಮುಖ ಮುಚ್ಚದೆಯೆ
ಮನ ಮೆಚ್ಚಿದವರೊಂದಿಗೆ ಹೆಜ್ಜೆ ಹಾಕುವರು

ಮಾತೇ ಬಾರದವರು ಅಲ್ಲಿ ತಾವೇ ಮಾತಾಗಿ
ಸುಳಿವ ಗಾಳಿಗೆ ಹಲವರ ಸೆರಗು ಜಾರಿ
ಮುದುಕಿಯರೂ ಯೌವ್ವನಕ್ಕೆ ಜಿಗಿದು
ಕಟ್ಟಿದ ಅನೇಕ ಪ್ರತಿಮೆಗಳು ಒಡೆದು
ಸತ್ಯ, ಸುಳ್ಳುಗಳ ಗೆರೆ ಕಲಸಿ ಕರಗುತ್ತದೆ!

ಗಂಡು ಹೆಣ್ಣೆಂಬ ಭೇದವೆಲ್ಲವೂ ಭಿನ್ನಗೊಂಡು
ಹೊಸದೊಂದು ಲೋಕ ತೆರೆದುಕೊಳ್ಳುತ್ತದೆ
ಎಲ್ಲ ಮುಗಿದು ಗರಿಯೊಂದು ತೇಲಿಬರುವಾಗ
ನಿನ್ನ ಬರವನ್ನು ಕಾಯುತ್ತೇನೆ ಕಾತರಳಾಗಿ

ಹಾಳು ಕಿಟಕಿ ತನ್ನಷ್ಟಕ್ಕೇ ಮುಚ್ಚಿಕೊಳ್ಳುತ್ತದೆ!
ನಿನ್ನ ಕಾಯುವ ಹುಕಿಯ ನಾಳೆಗೂ ಉಳಿಸಿ

● ಸುಧಾ ಆಡುಕಳ

